## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 02-12-2022

### ಮಾರ್ಕೆಟ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 97/2022 ಕಲಂ 457, 380 ಐಪಿಸಿ :-

ದಿನಾಂಕ 01-12-2022 ರಂದು 1430 ಗಂಟೆಯ ಸುಮಾರಿಗೆ ಫಿರ್ಯಾದಿ ಶ್ರೀ ಸೈಯದ ಜಾಫರ ತಂದೆ ಸೈಯದ ಇಸಾಕ ವಯ 38 ವರ್ಷ ಜಾತಿ ಮುಸ್ಲಿಂ ಉ;ಪಾನ ಮಾರಾಟ ಅಂಗಡಿ ಸಾ:ಟಿಪು ಸುಲ್ತಾನ ಕಾಲೋನಿ ಬೀದರ ರವರು ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೆನದರೆ, ದಿನಾಂಕ 27-11-2022 ರಂದು 1400 ಗಂಟೆಯ ಸುಮಾರಿಗೆ ಸಂಬಂಧಿಕರ ಮನೆಯಲ್ಲಿ ಮದುವೆ ಇರುವದ್ದರಿಂದ ಮನೆಗೆ ಬೀಗ ಹಾಕಿ ಹೋಗಿದಾಗ ಮನೆಯ ಬಾಗಿಲಿನ ಬೀಗ ಮುರಿದಿದ್ದು ಇದ್ದು, ಒಳಗೆ ಹೋಗಿ ನೋಡಲಾಗಿ, ಮನೆಯ ಮಲಗುವ ಕೋಣೆಯಲ್ಲಿರುವ ಅಲಮಾರಾದಲ್ಲಿರುವ ಎಲ್ಲಾ ಬಟ್ಟೆಗಳು ಚಲ್ಲಾಪಲ್ಲಿ ಆಗಿದ್ದು ಇರುತ್ತವೆ. ಅಲಮಾರಾದಲ್ಲಿರುವ 1) ಒಂದು ಬಂಗಾರದ ಉಂಗುರ 1 1/2 ಗ್ರಾಂ ಇದರ ಅ.ಕಿ.7500/-ರೂ 2) ಮೂರು ಜೊತೆ ಬೆಳ್ಳಿಯ ಚೈನ್ 10 ತೋಲೆದು ಇದರ ಅ.ಕಿ.6000/-ರೂ 3) ಬೆಳ್ಳಿಯ ಮಕ್ಕಳ ಕಡ್ಗಾ 5 ತೊಲೆದು ಇದರ ಇದರ ಅ.ಕಿ.3000/-ರೂ ಹಾಗು 4) ನಗದು ಹಣ 2000/-ರೂ ನೇದ್ದವುಗಳನ್ನು ದಿನಾಂಕ 27-11-2022 ರಂದು ರಾತ್ರಿ 1900 ಗಂಟೆಯಿAದ 2200 ಗಂಟೆಯ ಅವಧಿಯಲ್ಲಿ ಯಾರೋ ಅಪರಿಚಿತರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 143/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ: 01/12/2022 ರಂದು 13-30 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಮಾಹಿತಿ ಬಂದಿದೇನೆಂದರೆ ರಾಜೇಶ್ವರ ಗ್ರಾಮದ ಹುನುಮಾನ ಮಂದೀರದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬನು ಸಾರ್ವಜನಿಕರಿಂದ ಹಣವನ್ನು ಪಡೆದುಕೊಂಡು ಮಟಕಾ ನಂಬರ ಚೀಟಿ ಬರೆದು ಕೊಡುತಿದ್ದಾನೆ, ಅಂತಾ ಮಾಹಿತಿ ಬಂದಿದ್ದರಿAದ ಸಿಬ್ಬಂದಿಯೊAದಿಗೆ ಹೋಗಿ ನೋಡಿದಾಗ ಹನುಮಾನ ಮಂದಿರದ ಹತ್ತಿರ ಒಬ್ಬನು ಸಾರ್ವಜನಿಕ ಸ್ಥಳದಲ್ಲಿ ಕುಳಿತು 1 ರೂ ಗೆ 80 ರೂಪಾಯಿ ಕೊಡುತ್ತೇನೆ ಅಂತಾ ಜೋರಾಗಿ ಕೂಗಿ ಕೂಗಿ ಸಾರ್ವಜನಿರಿಗೆ ಕರೆದು ಸಾರ್ವಜನಕರಿಂದ ಹಣವನ್ನು ಪಡೆದುಕೊಂಡು ಮಟಕಾ ನಂಬರಿನ ಚೀಟಿ ಬರೆದು ಕೊಡುವಾಗ ಖಚಿತಪಡಿಸಿಕೊಂಡು 15;45 ಗಂಟೆಗೆ ಸದರಿಯವನ ಮೇಲೆ ಸಿಬ್ಬಂದಿಯವರ ಸಾಹಾಯದಿಂದ ದಾಳಿ ಹಿಡಿದು ವಿಚಾರಿಸಲು ತನ್ನ ಹೆಸರು ಮಂಜುನಾಥ ತಂದೆ ಮಲ್ಲಪ್ಪಾ ಘಾಂಗ್ರೆ ವಯ:40 ವರ್ಷ ಜಾತಿ:ಎಸ,ಸಿ ಹೊಲಿಯಾ ಉ:ಕೂಲಿಕೆಲಸ ಸಾ;ರಾಜೇಶ್ವರ ಅಂತಾ ತಿಳಸಿದನು, ನಂತರ ಸದರಿಯವನ ಅಂಗ ಜಡ್ತಿ ಮಾಡಲು ಸದರಿಯವನ ಹತ್ತಿರ 1) ನಗದು ಹಣ 2,070/-ರೂಪಾಯಿ 2) ಒಂದು ಮಟಕಾ ನಂಬರ ಬರೆದ ಚೀಟಿ 3) ಒಂದು ಬಾಲ ಪೆನ್ನು ಸಿಕ್ಕಿದ್ದು ಆತನ ಹತ್ತಿರ ಸಿಕ್ಕ ನಗದು ಹಣ, ಮಟಕಾ ನಂಬರ ಬರೆದ ಚೀಟಿ ಹಾಗೂ ಒಂದು ಬಾಲ ಪೆನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.